

# ಗಂಗೆ ಮಗುವಿನ 'ಮದುವೆಯಾಟ'

ಇದೆಲ್ಲದರ ಮಧ್ಯೆ ಕಾರಂಜಿ ಕಟ್ಟೆ ಈಗಲೂ ಇದೆ. ಆದರೆ ನೀರು ಚಿಮ್ಮುವ ಕಾರಂಜಿ ಮಾತ್ರ ಇಲ್ಲ. ಆ ಕಟ್ಟೆಯೊಳಗಿಳಿದು ಇಂದ್ರಾ ಗಾಂಧಿ ಆಟವಾಡುತ್ತ ದುಂಡು ಹರಳು ಕಲ್ಲುಗಳನ್ನು ಆರಿಸಿಕೊಳ್ಳುವಳು. ನಡು ನಡುವೆ ಓಡಿ ಬಂದು ತಾಯಿಗೆ ತಾನು ಹೆಕ್ಕಿಕೊಂಡ ಅಪರೂಪದ ಕೆಂಪು, ನೀಲಿ, ಕಂದು, ಬಿಳಿ ಹರಳುಗಳನ್ನು ತೋರಿ ಹಿಗ್ಗುತ್ತಿದ್ದಳು, 'ಎಷ್ಟು ಛಂದ ಇದೆ ಅಲ್ಲಾ...! ಇದನ್ನ ಇಟ್ಟುಕೊಳ್ಳಲಾ?...'

'ಹೂಂ...'

ಅದರಾಟ ಬೇಸರವಾದರೆ ಹೋಗಿ ಹೂಗಳನ್ನೆಲ್ಲಾ ಕಿತ್ತು ಶೇಖರಿಸಿ ಲಂಗದಲ್ಲಿ ತುಂಬಿಕೊಂಡು ಅಲ್ಲೇ ಕಾರಂಜಿ ನಡುವಿಗಿದ್ದ ಮತ್ಸಕನ್ಯೆ ಮೂರ್ತಿಗೆ ಅಲಂಕಾರ ಮಾಡುತ್ತಿದ್ದಳು. ಹೀಗೆ ಮನಸ್ಸಿಗೆ ಬಂದ ಹಾಗೆ ನಿರಾಳವಾಗಿ ಒಬ್ಬಳಿದ್ದರೂ ತೋಟದಲ್ಲಿ ಆಟವಾಡುವುದನ್ನು ಆ ಹುಡುಗಿ ಅಭ್ಯಾಸ ಮಾಡಿಕೊಂಡು ಬಿಟ್ಟಿದ್ದಳು.